**ನೋಂದಾಯಿತ ಅಂಚೆ ಸ್ವೀಕೃತಿ ಮುಖಾಂತರ**

ಸಂಖ್ಯೆ:ಎ4/ಸಿಬ್ಬಂದಿ/ಅ.ವೀ.ನೇ.ನೇ/ವಿವ.106/2017-18

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಮಂಗಳೂರು ವೃತ್ತ, "ಅರಣ್ಯ ಭವನ", ಅಳಪೆ, ಪಡೀಲು,
ಮಂಗಳೂರು-7, ದಿನಾಂಕ: 16-06-2020.

ಇವರಿಗೆ:

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಪಡೆ ಮುಖ್ಯಸ್ಥರು)
ಅರಣ್ಯ ಭವನ,
18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003.

ಮಾನ್ಯರೇ,

ವಿಷಯ: ಅರಣ್ಯ ವೀಕ್ಷಕ (ಬ್ಯಾಕ್‌ಲಾಗ್) ಹುದ್ದೆಗಳ ನೇರ ನೇಮಕಾತಿ ಕುರಿತು.

ಉಲ್ಲೇಖ:
1. ತಮ್ಮ ಕಛೇರಿ ಪತ್ರ ಸಂಖ್ಯೆ:ಬಿ9/ನೇಮಕಾತಿ/ವಿವ-05/2017-18, ದಿನಾಂಕ: 04-06-2020.
2. ಈ ಕಛೇರಿ ಪ್ರಕಟಣೆ ದಿನಾಂಕ: 16-06-2020.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ತಮ್ಮ ಕಛೇರಿ ಪತ್ರದಲ್ಲಿ ಸೂಚಿಸಿರುವಂತೆ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ, ಇತರೆ ಎಲ್ಲಾ ಮೂಲ ದಾಖಲಾತಿಗಳ ಕುರಿತು ಮೂಲ ದಾಖಲೆಗಳ ಪರಿಶೀಲನೆ ಹಾಗೂ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಮತ್ತು ನಿಗಧಿತ ವೈದ್ಯಕೀಯ ಪರೀಕ್ಷೆಗೆ ದಿನಾಂಕ: 22-06-2020 ರಂದು ಪೂರ್ವಾಹ್ನ 10.30 ಗಂಟೆಗೆ ಈ ಕೆಳ ಸಹಿದಾರ ಸಮ್ಮುಖ ಹಾಜರಾಗಲು ಪ್ರಕಟಣೆಯನ್ನು ಹೊರಡಿಸಲಾಗಿದೆ. ಸದ್ರಿ ಪ್ರಕಟಣೆಯನ್ನು ಈ ಪತ್ರದೊಂದಿಗೆ ಲಗ್ತೀಕರಿಸಿ ಸಲ್ಲಿಸುತ್ತಾ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಮ್ಮಲ್ಲಿ ಕೋರಲಾಗಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ, ಮಂಗಳೂರು.

ಕರ್ನಾಟಕ ಅರಣ್ಯ ಇಲಾಖೆ

## ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ, ಮಂಗಳೂರು ವೃತ್ತ, ಮಂಗಳೂರು

## ಪ್ರಕಟಣೆ

ಅಧಿಸೂಚನೆ ಸಂಖ್ಯೆ:ಎ4/ಸಿಬ್ಬಂದಿ/ಅ.ವೀ.ನೇ.ನೇ/ವಿವ.106/2017-18, ದಿನಾಂಕ: 16-06-2020

### ಅರಣ್ಯ ವೀಕ್ಷಕ (ಬ್ಯಾಕ್‌ಲಾಗ್) ಹುದ್ದೆಗಳ ನೇರ ನೇಮಕಾತಿ ಕುರಿತು

********

2 ಸಂಖ್ಯೆ ಅರಣ್ಯ ವೀಕ್ಷಕ ಹುದ್ದೆಯ ನೇರ ನೇಮಕಾತಿ ಕುರಿತಂತೆ ದಿನಾಂಕ: 16-02-2020 ರಂದು ಲಿಖಿತ ಪರೀಕ್ಷೆ ನಡೆದಿರುತ್ತದೆ. ದಿನಾಂಕ: 19-03-2020ರಲ್ಲಿ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ಮೀಸಲಾತಿ ನಿಯಮಗಳ ಅನುಸಾರ ಹಾಗೂ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿ ವಿಧಿಸಿರುವ ಷರತ್ತುಗಳ ಆಧಾರದ ಮೇರೆಗೆ 1:1 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಆಯ್ಕೆ ಪಟ್ಟಿ ಹಾಗೂ ತಾತ್ಕಾಲಿಕ ಕಾಯುವಿಕೆ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಸದರಿ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ, ಇತರೆ ಎಲ್ಲಾ ಮೂಲ ದಾಖಲಾತಿಗಳ ಕುರಿತು ಮೂಲ ದಾಖಲೆಗಳ ಪರಿಶೀಲನೆ ಹಾಗೂ ಈ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಮತ್ತು ನಿಗಧಿತ ವೈದ್ಯಕೀಯ ಪರೀಕ್ಷೆಗೆ ದಿನಾಂಕ: 22-06-2020 ರಂದು ಪೂರ್ವಾಹ್ನ 10.30 ಗಂಟೆಗೆ ಈ ಕೆಳ ಸಹಿದಾರ ಸಮ್ಮುಖ ಹಾಜರಾಗಲು ತಿಳಿಸಿದೆ.

ಅಭ್ಯರ್ಥಿಗಳು ದಿನಾಂಕ: 22-06-2020ರಂದು ಖುದ್ದಾಗಿ ಹಾಜರಾಗುವಾಗ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಇತ್ತೀಚಿಗಿನ ಮೂರು ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು. ಈ ಬಗ್ಗೆ ಅಭ್ಯರ್ಥಿಗಳು ಎಲ್ಲಾ ಪೂರ್ವಸಿದ್ದತೆಯನ್ನು ಮಾಡಿಕೊಳ್ಳಲು ತಿಳಿಸಿದೆ.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್ www.aranya.gov.in ನಲ್ಲಿ ಪ್ರಕಟಿಸಲಾಗಿದೆ.

ದಿನಾಂಕ: 16-06-2020
ಸ್ಥಳ: ಮಂಗಳೂರು

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಆಯ್ಕೆ ಪ್ರಾಧಿಕಾರ
ಮಂಗಳೂರು ವೃತ್ತ, ಮಂಗಳೂರು